ಲೋಕಾಯುಕ್ತದವರಿಗೆ ವಹಿಸುವುದರ ಮೂಲಕ ಇವರಿಂದ ನರಕಯಾತನೆಯನ್ನು ಅನುಭವಿಸಿದ ಸಾರ್ವಜನಿಕರಿಂದ ದೂರುಗಳನ್ನು ಸ್ವೀಕರಿಸಲು ಅವಕಾಶ ಮಾಡಿಕೊಡಲು ಹಾಗೂ ಇವರ ಮೇಲಿನ ಆಪಾದನೆಗಳು ಮುಗಿಯುವತನಕ ಯಾವುದೇ ಕಾರಣಕ್ಕಾಗಲಿ ಕೆಲಸಕ್ಕೆ ಮತ್ತೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸಬಾರದೆಂದು ಈ ಸೂಚನೆ ನೀಡುತ್ತಿದ್ದೇನೆ.

ಶ್ರೀ ಧರ್ಮಸಿಂಗ್: (ಗೃಹ ಸಚಿವರು):- ಮಾನ್ಯ ಅಧ್ಯಕ್ಷರೆ, ಮಹಾಲಕ್ಷ್ಮಿ ಬಡಾವಣೆಯ ಪೋಲೀಸ್ ಠಾಣೆಯ ಅಪಾರಧ ವಿಭಾಗದಲ್ಲಿ ಶ್ರೀ ಹಮೀದ್ ಬೇರಿ ಅವರು ಸಬ್ ಇನ್ಸ್‌ಪೆಕ್ಟರರಾಗಿ ದಿನಾಂಕ : 25-9-89 ರಿಂದ ಕೆಲಸ ಮಾಡುತ್ತಿದ್ದಾರೆ. ಅವರ ಮೇಲೆ ಕೆಲವು ದೂರುಗಳು ಬಂದಿದ್ದು, ಬೆಂಗಳೂರು ಅಪರಾಧ ವಿಭಾಗದ ಉಪ ಆಯುಕ್ತರು ವಿಚಾರಣೆಯನ್ನು ನಡೆಸಿ ಸುಮಾರು 21 ಪ್ರಕರಣಗಳಲ್ಲಿ ಕರ್ತವ್ಯ ಲೋಪ ಎಸಗಿರುವುದನ್ನು ಕಂಡು ಹಿಡಿದಿರುತ್ತಾರೆ. ಇವುಗಳಲ್ಲಿ ದೂರು ಕೊಟ್ಟಾಗ ಪ್ರಕರಣಗಳನ್ನು ನೋಂದಾಯಿಸದೆ ವಿಳಂಬ ಮಾಡಿರುವುದು, ಕೆಲವು ಪ್ರಕರಣಗಳನ್ನು ನೋಂದಾಯಿಸುವುದರಲ್ಲಿ ಲೋಪದೋಷಗಳನ್ನು ಎಸಗಿರುವುದು, ಪ್ರಕರಣವನು ್ನದಾಖಲಿಸಿಕೊಂಡ ನಂತರ ಒಂದೆರಡು ತಿಂಗಳಾದ ನಂತರವು ಕಳ್ಳತನದ ಪ್ರಕರಣಗಳಲ್ಲಿ ಕಳ್ಳತನವಾಗಿರುವ ಮಾಲಿನ ನಿಖರವಾದ ಬೆಲೆಯನ್ನು ಪರಿಗಣಿಸದೆ, ಪತ್ತೆ ಹಚ್ಚದೆ, ಇರುವುದು. ಗುರುತರವಾದ ಅಪರಾಧ ಪ್ರಕರಣಗಳನ್ನು ನೋಂದಾಯಿಸದೆ ಇರುವುದು, ಚಾರ್ಜ್‌ಶೀಟನ್ನು ಹಾಕಲು ಸಾಕಷ್ಟು ಸಾಕ್ಷ್ಯ ಪುರಾವೆಗಳು ಇದ್ದರೂ ಸಹ ಅಂತಹ ಪ್ರಕರಣವನ್ನು ಸುಳ್ಳು ಪ್ರಕರಣವೆಂದು ಪರಿಗಣಿಸಿರುವುದು, ಇವೇ ಮುಂತಾದ ಕರ್ತವ್ಯ ಲೋಪವನ್ನು ಎಸಗಿರುವುದು ಕಂಡು ಬಂದಿರುತ್ತದೆ. ಈ ಅಪರಾಧಗಳು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಶ್ರೀ ಹಮೀದ್ ಬೇರಿ ಅವರನ್ನು ದಿನಾಂಕ:12-2-92ರಿಂದ ಅಮಾನತ್ತಿನಲ್ಲಿ ಇಡಲಾಗಿದೆ. ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಆದೇಶ ಹೊರಡಿಸಲಾಗಿದೆ. ವಿಚಾರಣೆ ನಡೆಯುತ್ತಿದೆ. ಇವರ ಅಮಾನತ್ತನ್ನು ರದ್ದುಗೊಳಿಸುವ ಪ್ರಶ್ನೆ ಸದ್ಯದಲ್ಲಿ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

8. ಕರ್ನಾಟಕ ರಾಜ್ಯದಲ್ಲಿ ಅಂಗನವಾಡಿ ಕಾಯಕರ್ತೆಯರು ಮತ್ತು ಸಹಾಯಕರಿಗೆ ಇತರ ರಾಜ್ಯಗಳಲ್ಲಿ ಈಗ ನೀಡುತ್ತಿರುವ ಗೌರವಧನಕ್ಕೆ ಪೂರಕವಾಗಿ ರೂ 800 ವೇತನ ನೀಡುವಂತೆ ಕ್ರಮ ಕೈಗೊಳ್ಳುವ ಕುರಿತು.

ಶ್ರೀ ಕೆ.ಕುಶಾಲ : (ಸುಳ್ಯ):- ಸನ್ಮಾನ್ಯ ಅಧ್ಯಕ್ಷರೆ, ದಿನಾಂಕ 05-02-1992 ರಂದು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರುಗಳು ರಾಷ್ಟ್ರವ್ಯಾಪ್ತಿಯ ಉಪವಾಸ ಸತ್ಯಾಗ್ರಹವನ್ನು (ಒಂದು ದಿನದ) ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಹಮ್ಮಿಕೊಂಡಿದ್ದರು. ಸದರಿಯವರ ಬೇಡಿಕೆಗಳು ಹೆಚ್ಚು ವರ್ಷ ಸೇವೆ ಸಲ್ಲಿಸಿದ ಮೆಟ್ರಿಕ್ ಪಾಸಾದ ಕಾರ್ಯಕರ್ತೆ, ಸಹಾಯಕರುಗಳಿಗೆ ,ಪ್ರಾಥಮಿಕ ಶಾಲಾ ಶಿಕ್ಷಕಿಯರನ್ನಾಗಿ ನೇಮಿಸುವುದು.- 58 ವರ್ಷ ವಯಸ್ಸಾದ ಕಾರ್ಯಕರ್ತೆ, ಸಹಾಯಕಿಯರಿಗೆ ನಿವೃತ್ತಿ ವೇತನ ನೀಡುವುದು, ಗೌರವ ಧನ ಜಾಸ್ತಿ ಮಾಡುವುದು, ಇಲ್ಲವೆ ವೇತನ ನಿಗಧಿ ಮಾಡುವುದು . ಇಲ್ಲವೇ ಕೇರಳ, ಮಹಾರಾಷ್ಟ್ರ, ಗೋವಾ ರಾಜ್ಯಗಳ ಸರ್ಕಾರ ಈಗ ನೀಡುತ್ತಿರುವ ಗೌರವ ಧನಕ್ಕೆ ಪೂರಕವಾಗಿ , ಒಟ್ಟು ರೂಪಾಯಿ 800-00 ಗೌರವಧನ, ವೇತನ ನೀಡುವಂತೆ ಮಾಡುವುದಾಗಿದೆ. ಆದುದರಿಂದ ಇತರ ರಾಜ್ಯಗಳು ಸದ್ರಿ ಕಾರ್ಯಕರ್ತೆಯರಿಗೆ , ಸಹಾಯಕಿಯರಿಗೆ ರೂ. 800-00 ವೇತನ, ಗೌರವ ಧನ, ನೀಡುವಂತೆ ನಮ್ಮ ರಾಜ್ಯ ಸರ್ಕಾರ ನೀಡುವಂತೆ ವ್ಯವಸ್ಥೆ ಮಾಡಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ.ಶಿವಣ್ಣ:(ಸಮಾಜ ಕಲ್ಯಾಣ ಸಚಿವರು):- ಮಾನ್ಯಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಬಾಲವಿಕಾಸ ಯೋಜನೆಯು ಕಾರ್ಯರೂಪದಲ್ಲಿದೆ. ಈ ಯೋಜನೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಕೇಂದ್ರ ಸರ್ಕಾರದ ಮಾರ್ಗ ಸೂಚಿಯಂತೆ ಗೌರವ ಸೇವೆಗೆ ಗೌರವ ಧನ ಪಡೆಯುತ್ತಿದ್ದಾರೆ. ಅಂಗನವಾಡಿ ಕಾರ್ಯಕರ್ತೆಯರು ಗೌರವ ಧನ ಹೆಚ್ಚಿಸುವ ಬಗ್ಗೆ ಬೇಡಿಕೆಯನ್ನು ಸರ್ಕಾರದ ಮುಂದಿಟ್ಟು ಮುಷ್ಕರ ಹೂಡಿದ್ದರು.

ಮುಖ್ಯಮಂತ್ರಿಗಳು ಮತ್ತು ನಾನು ಸಂಘದ ಪದಾಧಿಕಾರಿಗಳೊಂದಿಗೆ ಈ ಬಗ್ಗೆ ಚರ್ಚಿಸಿ ಕೇಂದ್ರ ಸರ್ಕಾರಕ್ಕೆ ಅಂಗನವಾಡಿ ಕಾರ್ಯಕರ್ತೆಯರ ಗೌರವ ಧನ ಹೆಚ್ಚಿಸುವ ವಿಚಾರದಲ್ಲಿ ಪತ್ರ ಬರೆಯಲಾಗಿದೆ. ಪ್ರಧಾನ ಮಂತ್ರಿಗಳು ಈ ಬಗ್ಗೆ ಮುಖ್ಯಮಂತ್ರಿಯವರಿಗೆ ಪತ್ರ ಬರೆದು ಈ ವಿಷಯವು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ತಿಳಿಸಿದ್ದಾರೆ. ಅಂಗನವಾಡಿ ಕಾಯಕರ್ತೆಯರ ಗೌರವ ಧನ ಹೆಚ್ಚಿಸುವ ವಿಚಾರದಲ್ಲಿ ನೆರೆ ರಾಜ್ಯಗಳು ರಾಜ್ಯ ಸರ್ಕಾರದ ವತಿಯಿಂದ ಯಾವುದೇ ಹೆಚ್ಚಳವನ್ನು ಮಾಡಿರುವುದಿಲ್ಲ.

ಸಮಗ್ರ ಬಾಲವಿಕಾಸ ಯೋಜನೆಯು ರಾಷ್ಟ್ರ ವ್ಯಾಪ್ತಿ ಕಾರ್ಯಕ್ರಮವಾಗಿರುವುದರಿಂದ ಗೌರವ ಧನ ಹೆಚ್ಚಿಸುವ ವಿಷಯ ಕೇಂದ್ರ ಸರ್ಕಾರವೇ ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ.

ಪ್ರಕಟಣೆ

ಗೈರು ಹಾಜರಿಗೆ ಅನುಮತಿ ಕೋರಿಕೆ

ಛೇರ್ಮನ್:- ವಿಧಾನ ಸಭಾ ಸದಸ್ಯರಾದ ಶ್ರೀ ವೀರೇಂದ್ರ ಪಾಟೀಲ್ ರವರು ದಿನಾಂಕ : 21-02-1992 ರಿಂದ 25-02-92 , 27-02-92 ರಿಂದ 23-03-92 ಹಾಗೂ25-03-1992 ರಿಂದ ಉಪವೇಶನ ಮುಗಿಯುವವರೆಗೆ ಗೈರು ಹಾಜರಾಗಲು ಅನುಮತಿಯನ್ನು ಕೋರಿ ಪತ್ರವನ್ನು ಬರೆದಿರುತ್ತಾರೆ.

"ಶ್ರೀ ವೀರೇಂದ್ರ ಪಾಟಿಲ್ ರವರಿಗೆ ದಿನಾಂಕ : 21-02-1992 ರಿಂದ25-02-1992, 27-02-1992 ರಿಂದ 23-02-1992 ಹಾಗೂ 25-03-1992ರಿಂದ ಸದರಿ ಅಧಿವೇಶನದ ಅಂತ್ಯದವರೆಗೂ ವಿಧಾನ ಸಭೆಯ ಉಪವೇಶಗಳಿಗೆ ಗೈರು ಹಾಜರಾಗಲು ಅನುಮತಿ ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೆ".

(ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಿಲ್ಲ)

ಛೇರ್ಮನ್:- ಮಾನ್ಯ ಸದಸ್ಯರಾದ ಶ್ರೀ ವೀರೇಂದ್ರ ಪಾಟೀಲ್‌ರವರಿಗೆ ಗೈರು ಹಾಜರಾಗಲು ಅನುಮತಿಯನ್ನು ನೀಡಲಾಗಿದೆ.

ಶಾಸನ ರಚನಾ ಕಾರ್ಯಕಲಾಪಗಳು

1. 1992ರ, ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್.ಬಂಗಾರಪ್ಪ (ಮುಖ್ಯಮಂತ್ರಿಯವರು):- ಮಾನ್ಯ ಅಧ್ಯಕ್ಷರೆ,1992ರ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಛೇರ್ಮನ್:-ಪ್ರಸ್ತಾವ ಏನೆಂದರೆ :" 1992ರ ಕರ್ನಾಟಕ ಮನರಂಜನಾ ತೆರಿಗೆ(ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"